ಶ್ರೀ ಬಿ. ಸತ್ಯನಾರಾಯಣ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಕಳೆದ ಬಜೆಟ್ ಸ್ಪೀಚಿನಲ್ಲಿ ನಾವು ಐದು ಹೊಸ ಐಟಿಐ ಕಾಲೇಜನ್ನು ಕೊಡುತ್ತೇವೆಂದು ಹೇಳಿದ್ದರು. ಅದರಂತೆ ನಾವು ಕೊಡಲಿಕ್ಕೆ ಎಲ್ಲಾ ರೀತಿಯ ಕೆಲಸವನ್ನು ಮಾಡಿದ್ದೇವೆ. ಸಧ್ಯದಲ್ಲಿಯೇ ಆ ಸ್ಥಳಗಳನ್ನು ಗುರುತಿಸಿ ಆ ಕಾಲೇಜುಗಳನ್ನು ಕೊಡಲಿಕ್ಕೆ ವ್ಯವಸ್ಥೆ ಆಗಲಿದೆ. ಈಗಾಗಲೇ ಹೇಳಿದ ಹಾಗೆ ಬಹುಶಃ ಎಲ್ಲಾ ತಾಲ್ಲೂಕಿಗಳಿಂದಲೂ ಸಹ ಈ ಕಾಲೇಜುಗಳ ಬಗ್ಗೆ ಬೇಡಿಕೆಗಳು ನಮ್ಮ ಶಾಸಕ ಬಂಧುಗಳಿಂದ ಬಂದಿದೆ. ಒಂದೇ ಸಾರಿ ಇವೆಲ್ಲಾ ಅನುಕೂಲಗಳ ಜೊತೆ ಹಣಕಾಸಿನ ಪ್ರಶ್ನೆ ಬಹುಮುಖ್ಯವಾಗಿರುವುದರಿಂದ ಹಂತ ಹಂತವಾಗಿ ನಾವು ಹೆಚ್ಚು ಹೆಚ್ಚು ಕಾಲೇಜುಗಳನ್ನು ಕೊಡಲು ಪ್ರಯತ್ನ ಮಾಡುತ್ತೇವೆ ಎನ್ನುವಂತಹ ಮಾತನ್ನು ತಮ್ಮ ಮೂಲಕ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಅಧ್ಯಕ್ಷರು : ಉಳಿದಿದ್ದು ಏನಾದರೂ ಇದ್ದರೆ ಊರಿಗೆ ಹೋಗುತ್ತಾ ನಿಮ್ಮ ಹತ್ತಿರ ಬಂದು ಮಾತನಾಡಿಕೊಂಡು ಹೋಗುತ್ತಾರೆ. ಇವತ್ತು ಒಂದು ದಿವಸ ನನ್ನ ಜೊತೆ ಸಹಕರಿಸಿ ನೀವು ಸವಣೂರು, ಬಂಕಾಪುರ ಬಿಟ್ಟು ಬೇರೆ ಏನೂ ಮಾತು ಎತ್ತುವುದಿಲ್ಲ.

ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ

379 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು-ಮೈಸೂರು ನಡುವೆ ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣವು ಯಾವಾಗ ಪ್ರಾರಂಭವಾಯಿತು, ಈಗ ಯಾವ ಹಂತದಲ್ಲಿದೆ. ಯಾವಾಗ ಪೂರ್ಣಗೊಳ್ಳುವುದು?*

ಆ) *ಈ ರಸ್ತೆ ನಿರ್ಮಾಣಕ್ಕೆ ಒಟ್ಟು ಎಕರೆ ಜಮೀನು ಅವಶ್ಯಕತೆ ಇದೆ. ಈ ಜಮೀನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?*

ಇ) *ಈ ರಸ್ತೆ ನಿರ್ಮಾಣಕ್ಕೆ ಒಟ್ಟು ತಗಲುವ ಅಂದಾಜು ವೆಚ್ಚವೆಷ್ಟು? ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಎಷ್ಟು ಹಣ ಖರ್ಚಾಗಿದೆ? ಯಾರಿಗಾದರು ಗುತ್ತಿಗೆ ನೀಡಲಾಗಿದೆಯೇ? ಹಾಗಿದ್ದಲ್ಲಿ ಗುತ್ತಿಗೆದಾರರ ಹೆಸರೇನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇದುವರೆವಿಗೂ ನಿರ್ಮಾಣ ಕಾರ್ಯ ಪ್ರಾರಂಭಿಸಿಲ್ಲ. ಹತ್ತು ವರ್ಷದಲ್ಲಿ ಪೂರ್ಣಗೊಳ್ಳುವುದು.

ಆ) ರಸ್ತೆಗೆ 7000 ಎಕರೆ ಭೂಮಿ ಅವಶ್ಯಕತೆಯಿದೆ. ಭೂಸ್ವಾಧೀನಕ್ಕೆ ಪೂರ್ವಭಾವಿ ಸಿದ್ಧತೆ ಪ್ರಗತಿಯಲ್ಲಿದೆ.

ಇ) ನಿರ್ಮಾಣಕ್ಕೆ 2000 ಕೋಟಿ ರೂ.ಗಳೆಂದು ಸಂಸ್ಥೆ ಅಂದಾಜಿಸಿದೆ. ಸರ್ಕಾರದ ವತಿಯಿಂದ ಯಾವುದೇ ತರಹದ ಬಂಡವಾಳ ಹೂಡಿಕೆ ಇರುವುದಿಲ್ಲ.

ಈ) ಈ ಯೋಜನೆಯನ್ನು ಖಾಸಗಿ ಸಂಸ್ಥೆಯಾದ "ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್" ರವರು ಅವರದೇ ವೆಚ್ಚದಲ್ಲಿ ಕೈಗೊಳ್ಳುವರು.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ನಿರ್ಮಾಣ ಕಾರ್ಯ ಪ್ರಾರಂಭ ಮಾಡಿಲ್ಲ. ಹತ್ತು ವರ್ಷದಲ್ಲಿ ಪೂರ್ಣಗೊಳಿಸುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಇವರಿಗೆ ಹತ್ತು ವರ್ಷದಲ್ಲಿ ಪೂರ್ಣ ಆಗುತ್ತದೆ ಎಂದು ಹೇಳುವವರು, ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬ ವಿಚಾರ ಇಲ್ಲಿಯವರೆಗೂ ಏಕೆ ಗಮನಕ್ಕೆ ಬಂದಿಲ್ಲ ಎನ್ನತಕ್ಕ ಪ್ರಶ್ನೆ. ಎರಡನೆಯದು ರಸ್ತೆಗೆ 7000 ಎಕರೆ, ಭೂಮಿ ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದರಲ್ಲಿ ಸರ್ಕಾರಿ ಭೂಮಿ ಎಷ್ಟು, ಖಾಸಗಿ ಭೂಮಿ ಎಷ್ಟು ಎನ್ನುವ ವಿಚಾರವನ್ನು ದಯಮಾಡಿ ತಿಳಿಸಬೇಕು. ಮತ್ತೆ 2000 ಕೋಟಿ ರೂಪಾಯಿ ವೆಚ್ಚ ಆಗುತ್ತದೆ ಎನ್ನುವಂತಹ ಮಾತನ್ನು ಸನ್ಮಾನ್ಯ ಸಚಿವರು ತಿಳಿಸಿದ್ದಾರೆ. ಅಂದರೆ ಒಂದು ಕಿಲೋ ಮೀಟರ್‌ಗೆ ತಗಲುವ ವೆಚ್ಚವನ್ನು ದಯಮಾಡಿ ಕೊಡಬೇಕು ಎನ್ನತಕ್ಕ ಮಾತನ್ನು ಕೇಳುತ್ತಿದ್ದೇನೆ. ಹಿಂದೆ ಕಲ್ಯಾಣಿ ಗ್ರೂಪ್ ಆಫ್ ಇಂಡಸ್ಟ್ರೀಸ್ ಅವರಿಗೆ 20.02.95ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸನ್ನಿಧಿಯಲ್ಲಿ ಕೆಲಸ ಪ್ರಾರಂಭ ಮಾಡಲಿಕ್ಕೆ ಆ ಒಂದು ಕಂಪನಿಗೆ ಕೊಟ್ಟಿದ್ದೇವೆಂಬ ಉತ್ತರವನ್ನು ಮಾನ್ಯ ಕೌಜಲಗಿ ಅವರು ಇದ್ದಾಗ ಕೊಟ್ಟಿದ್ದಾರೆ. ಆದರೆ ಇವತ್ತಿನ ಉತ್ತರದಲ್ಲಿ 'ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡರ್ ಎಂಟರ್‌ಪ್ರೈಸಸ್ ಲಿಮಿಟೆಡ್' ಅವರಿಗೆ ಕೊಟ್ಟಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಈ ತರಹ ಬದಲಾವಣೆ ಆಗಿದ್ದುದು ಏಕೆ? ಇದರಲ್ಲಿ ಯಾವುದಾದರೂ ಅವ್ಯವಹಾರ ಇದೆಯೇ? ಆರನೆಯದು ವೆಚ್ಚ ಮತ್ತು ಲಾಭಾಂಶಗಳನ್ನು ಟೋಲ್ ಮುಖಾಂತರ ಸಂಗ್ರಹ ಮಾಡುತ್ತೇವೆನ್ನುವಂತಹ ವಿಚಾರವನ್ನು ಪತ್ರಿಕೆಗಳ ಮುಖಾಂತರ ಓದಿದ್ದೇವೆ. ಅಂದರೆ ಎಷ್ಟು ವರ್ಷಗಳ ಕಾಲ ಈ ಟೋಲ್ ಮುಖಾಂತರ ಹಣವನ್ನು ಸಂಗ್ರಹ ಮಾಡುತ್ತೀರಿ? ಮತ್ತೆ ಯಾವ್ಯಾವ ವಾಹನಗಳಿಗೆ ಎಷ್ಟೆಷ್ಟು ನಿಗದಿ ಮಾಡಿದ್ದೀರಿ ಎನ್ನತಕ್ಕ ಉತ್ತರವನ್ನು ದಯವಿಟ್ಟು ಕೊಡಬೇಕು. ಮತ್ತು ಎಷ್ಟು ಉಪ ನಗರಗಳನ್ನು ನಿರ್ಮಾಣ ಮಾಡುತ್ತಾರೆ ಮತ್ತೆ ಮೈಸೂರು ನಗರದಲ್ಲಿ.

ಅಧ್ಯಕ್ಷರು : ಎಷ್ಟು ಉಪ ಪ್ರಶ್ನೆಗಳು?

ಶ್ರೀ ಇ. ಮಾರುತಿರಾವ್ ಪವಾರ್ : ಇವು ಬಹಳ ಅವಶ್ಯಕವಾದಂತಹ ಪ್ರಶ್ನೆಗಳು.

ಅಧ್ಯಕ್ಷರು : ನಾಳೆ ಮಂತ್ರಿಗಳ ಜೊತೆ ಕಂಪ್ಯೂಟರ್ ಇಟ್ಟು ಕೆಲಸ ಮಾಡಿಸಬೇಕಾಗುತ್ತದೆ.

ಶ್ರೀ ಸಿ. ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ಮೈಸೂರು ಹೆದ್ದಾರಿ ಮುಗಿಸಲಿಕ್ಕೆ ಹತ್ತು ವರ್ಷ ಬೇಕಾಗುತ್ತದೆ ಎಂದು ನಾನು ಹೇಳಿದಾಗ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಅವರು ಮೊದಲ ಪ್ರಶ್ನೆ ಕೇಳಿದ್ದಾರೆ. ಈಗಾಗಲೇ ಭೂಮಿ ಸ್ವಾಧೀನಪಡಿಸುವಂತಹ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಆ ಕಾರ್ಯಕ್ರಮ ಸಂಪೂರ್ಣವಾಗಿ ಮುಗಿದ ಮೇಲೆ ಒಂದೂವರೆಯಿಂದ ಎರಡು ವರ್ಷದಲ್ಲಿ ಲ್ಯಾಂಡ್ ಅಕ್ವಿಶಿಷನ್ ಪೂರ್ತಿ ಮುಗಿಯುತ್ತದೆ ಎನ್ನುವಂತಹ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ರಸ್ತೆಗಾಗಿ ಎಷ್ಟು ಜಮೀನು ಬೇಕಾಗುತ್ತದೆ ಎನ್ನುವಂತಹ ಮಾತನ್ನು ಕೇಳಿದಾಗ

ಇದರಲ್ಲಿ ಸುಮಾರು 7 ಸಾವಿರ ಎಕರೆ ಬೇಕಾಗುತ್ತದೆ ಎಂದು ಹೇಳಿದ್ದೇನೆ. ಇದರಲ್ಲಿ ಸರ್ಕಾರಿ ಭೂಮಿ ಎಷ್ಟು ಬೇಕಾಗುತ್ತದೆ, ಖಾಸಗಿ ಭೂಮಿ ಎಷ್ಟು ಬೇಕಾಗುತ್ತದೆ ಎಂದು ಕೇಳಿದ್ದಾರೆ. ಈಗ ಲ್ಯಾಂಡ್ ಅಕ್ವಿಸಿಷನ್ ಮಾಡುವಾಗ ಸಂಪೂರ್ಣವಾಗಿ ಇಲ್ಲಿಂದ ಹಿಡಿದು ಮೈಸೂರುವರೆಗೆ ಎಲ್ಲಾ ರಸ್ತೆಗಳನ್ನು ಸರ್ವೆ ಮಾಡಿ ಅಕ್ವಿಸಿಷನ್ ಮಾಡುವಾಗ ಕೊನೆಗೆ ಹೊತ್ತಾಗುತ್ತದೆ, ಮೊದಲೇ ಗೊತ್ತಾಗುವುದಿಲ್ಲ ಎಂದು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದರಲ್ಲಿ ಒಟ್ಟು ಖರ್ಚಾಗುವಂತಹ ಹಣ ಎರಡು ಸಾವಿರ ಕೋಟಿ ರೂಪಾಯಿ ಎಂದು ಹೇಳಿದರೆ ಈ ಎರಡು ಸಾವಿರ ಕೋಟಿ ರೂಪಾಯಿ ಈ ರಸ್ತೆಗೆ ಖರ್ಚಾಗುತ್ತದೇನೋ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಎಕ್ಸ್‌ಪ್ರೆಸ್ ಹೈವೇಗಳಿಗೆ ಮಾತ್ರ ಸೀಮಿತವಾಗಿ 888 ಕೋಟಿ ರೂಪಾಯಿಗಳಷ್ಟು ಹಣ ಅದಕ್ಕೆ ಖರ್ಚು ಮಾಡಬೇಕಾಗುತ್ತದೆ ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಎಲಿವೇಟರ್ ರಸ್ತೆಗೆ 186 ಕೋಟಿ ರೂಪಾಯಿ, ಪೆರಿಷಬಲ್ ರಸ್ತೆಗೆ 40 ಕೋಟಿ ರೂಪಾಯಿ, ಲಿಂಕ್ ರಸ್ತೆಗೆ 58 ಕೋಟಿ ರೂಪಾಯಿ. ಮೈಸೂರು ಲಿಂಕ್ ರಸ್ತೆಗೆ 8 ಕೋಟಿ ರೂಪಾಯಿ ಹಾಗೂ ರೆಸ್ಟ್ ರೂಮ್ಸ್ ವಗೈರೆಗೆ 250 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಎನ್ನುವಂತಹ ಮಾತನ್ನು ಹೇಳಿದ್ದಾರೆ. ಭೂ ಸ್ವಾಧೀನಗೊಳಿಸುವ ಸಲುವಾಗಿಯೇ ಸುಮಾರು 170 ಕೋಟಿ ರೂಪಾಯಿಗಳು ಇದಕ್ಕೆ ಬೇಕಾಗುತ್ತದೇನೋ ಎನ್ನುವಂತಹ ಮಾತು ಇದೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ರಸ್ತೆಯನ್ನು ಅವರು ಭೂ ಸ್ವಾಧೀನ ಪಡಿಸಿಕೊಂಡ ಹತ್ತು ವರ್ಷಗಳಲ್ಲಿ ಮುಗಿಸಬೇಕು ಎನ್ನುವಂತಹದ್ದು ಇದ್ದಾಗಲೂ ಸಹಿತ ಅದಕ್ಕಿಂತ ಮೊದಲೇ ಅವರು ಮುಗಿಸಲಿಕ್ಕೆ ಸಾಧ್ಯ ಇದೆ. ಏಕೆಂದರೆ ಟೋಲ್ ಕಲೆಕ್ಟ್ ಮಾಡಬೇಕಾದಂತಹದನ್ನು ಸರ್ಕಾರ ಅದಕ್ಕೆ ನಿಗದಿ ಪಡಿಸಿದಂತಹ ದರದಲ್ಲಿ ಟೋಲನ್ನು ಕಲೆಕ್ಟ್ ಮಾಡಬೇಕಾಗುತ್ತದೆ. 30 ವರ್ಷದ ವರೆಗೆ ಟೋಲ್ ಕಲೆಕ್ಟ್ ಮಾಡಿ ಮುಂದಿನ 30 ವರ್ಷದವರೆಗೆ ಸರಿಯಾದ ರೀತಿಯಲ್ಲಿ ಉಳಿಸಿಕೊಳ್ಳುವಂತಹ ರಸ್ತೆಯನ್ನಾಗಿ ಮಾಡಿ ಅವರಿಗೆ ಬಿಟ್ಟು ಕೊಡಬೇಕು ಎನ್ನುವಂತಹದು ಅದರಲ್ಲಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ; ಬಹಳ ದೊಡ್ಡದು ವಿಚಾರ. ಈ ರಸ್ತೆ ತಾವು ಮಾಡುವಂತಹ ಕಾಲದಲ್ಲಿ ಆರು ಸೆಟಲೈಟ್ ಟೌನ್ ಮಾಡುವುದಕ್ಕೆ ಇದನ್ನೂ ಸೇರಿಸಿ ಕೊಡುತ್ತಿದ್ದೀರಿ. ನನ್ನದೇನು ಅಂದರೆ ನೀವು ಸೆಟಲೈಟ್ ಟೌನ್ ಮಾಡುವುದಾದರೆ ಗ್ಲೋಬಲ್ ಟೆಂಡರ್ ಕರೆಯಬೇಕಾಗುತ್ತದೆ. 20 ಸಾವಿರ ಎಕರೆ ತೆಗೆದು ಅವನಿಗೆ ಕೊಡುವುದಕ್ಕೆ ಹೊರಟಿದ್ದೀರಿ. ಅದಕ್ಕೋಸ್ಕರ ನಾನು ಹೇಳುವಂತಹದು ದಯಮಾಡಿ ಈ ಡೀಟೈಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಸದನದ ಮುಂದೆ ಇಡುತ್ತೀರೋ? ಹೈ ಪವರ್ ಕಮಿಟಿ ರಿಪೋರ್ಟ್ ಏನು ಇದೆ? ಫೀಸಬಿಲಿಟಿ ರಿಪೋರ್ಟ್ ಏನು ಇದೆ? ಅಗ್ರಿಮೆಂಟ್ ಕಾಪಿ ಏನು? ಏಕೆಂದರೆ ನನ್ನ ದೃಷ್ಟಿಯಿಂದ ನೀವು ಬೆಂಗಳೂರು ಮೈಸೂರು ರಸ್ತೆ ಮಾಡುವುದರಲ್ಲಿ ನಮ್ಮದು ಯಾರದ್ದೂ ಅಭ್ಯಂತರ ಇಲ್ಲ. ಆದರೆ ಐದು ಸೆಟಲೈಟ್ ಟೌನ್ ಮಾಡುವುದಕ್ಕೆ 15-20 ಸಾವಿರ ಜಮೀನು ಮಾಡುವುದಾದರೆ ಇದರ ಬಗ್ಗೆ ಡೀಟೈಲ್ಡ್ ಆಗಿ ಚರ್ಚೆ ಆಗಬೇಕಾಗುತ್ತದೆ. ಯಾರಿಗೂ ಹೇಳದೇ ಕೇಳದೇ ಅಗ್ರಿಮೆಂಟ್ ಮಾಡಿಕೊಂಡು ನೀವು ಯಾರಿಗೋ ಕೊಡುವುದಕ್ಕೆ ಆಗುವುದಿಲ್ಲ. ಈ ಡೀಟೇಲ್ಸ್ ನಮಗೆ ಒದಗಿಸಿ ಕೊಡಿ. ಇಲ್ಲದೇ

ಇದ್ದರೆ ಇದು ಒಂದು ತರಹ ಲ್ಯಾಂಡ್ ಗ್ರಾಬಿಂಗ್ ಸ್ಕೀಮ್ ಆಗುತ್ತದೆಯೇ ಹೊರತು ಜನರ ದೃಷ್ಟಿಯಿಂದ ಆಗುವುದಿಲ್ಲ. ಗ್ಲೋಬಲ್ ಟೆಂಡರ್ ಕರೆಯಬೇಕಾಗುತ್ತದೆ. ತಾವು ಡೀಟೇಲ್ಸ್ ಕೊಡುವುದಕ್ಕೆ ನಿಮ್ಮ ಹತ್ತಿರ ಇದೆಯಾ ಕೊಡುತ್ತೀರಾ?

ಅಧ್ಯಕ್ಷರು : ಡಿಮ್ಯಾಂಡ್ಸ್ ತೆಗೆದುಕೊಳ್ಳುತ್ತೇವೆಲ್ಲಾ .

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದೇನು ಅಭಿಪ್ರಾಯ ಅಂದರೆ. ನಮ್ಮ ದೇಶದ ಇತಿಹಾಸದಲ್ಲಿಯೇ 20 ಸಾವಿರ ಎಕರೆ ಕೊಟ್ಟು ಇಂತಹ ಐದು, ಆರು ಸೆಟಲೈಟ್ ಟೌನ್ ಮಾಡುತ್ತೇವೆಂದು ಹೇಳಿದಾಗ ಚರ್ಚೆ ಮಾಡದೇ ಒಪ್ಪಿಕೊಳ್ಳುವುದಾದರೆ ಕಷ್ಟ ಆಗುತ್ತದೆ.

ಅಧ್ಯಕ್ಷರು : ಡಿಮ್ಯಾಂಡ್ ಟೈಮಿನಲ್ಲಿ ಚರ್ಚೆ ಮಾಡಬಹುದಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡೀಟೇಲ್ಸ್ ಕೊಡುವುದಕ್ಕೆ ಏನು ತೊಂದರೆ ಇದೆ? ಎಲ್ಲ ಶಾಸಕರಿಗೂ ಬೇಕಲ್ಲಾ.

ಅಧ್ಯಕ್ಷರು : ಈಗ ಬೇಡ. Alright. I will examine it.

ಶ್ರೀ ಬಿ.ಎಸ್. ಯಡಿಯೂರಪ್ಪ : 20 ಸಾವಿರ ಎಕರೆ ಜಮೀನು ಕೊಡುವಂತಹ ಕಾಲದಲ್ಲಿ ಈ ಮನೆಗೆ ಡೀಟೇಲ್ಸ್ ಗೊತ್ತಿರಬೇಕಲ್ಲಾ. ಅದಕ್ಕೆ ನಾನು ಕೇಳಿದಂತಹ ಡೀಟೈಲ್ಸ್ ಕೊಡುವುದಕ್ಕೆ ಏನಾದರೂ ಅಡ್ಡಿ ಆತಂಕ ಇದೆಯೇ?

4.20 ಪಿ.ಎಂ

ಶ್ರೀ ಡಿ.ಕೆ. ಶಿವಕುಮಾರ್ : ಎಕ್ಸ್‌ಪ್ರೆಸ್ ಹೈವೆಯಲ್ಲಿ ಸ್ಯಾಟಲೈಟ್ ಟೌನ್ ಮಾಡುವುದಕ್ಕಾಗಿ ಭೂಸ್ವಾಧೀನ ಮಾಡುವ ಹಂತದಲ್ಲಿ ಎಕ್ಸ್‌ಪ್ರೆಸ್ ಹೈವೆಗೇ ಏನು ಎಮರ್ಜೆನ್ಸಿ ಕ್ಲಾಸ್ ಉಪಯೋಗಿಸಿ ಅದನ್ನು ಸ್ವಾಧೀನ ಮಾಡುತ್ತಿದ್ದಾರೆ ಅದೇ ರೀತಿಯ ಕಾನೂನನ್ನು ಸ್ಯಾಟಲೈಟ್ ಟೌನ್‌ಗೂ ಅನ್ವಯಿಸುತ್ತಿದ್ದಾರೆ ಎಂದು ನಮಗೆ ತಿಳಿದುಬಂದಿದೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಅಧ್ಯಕ್ಷರು : ಅದಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳನ್ನೂ ಇನ್ನೊಂದು ವಿಶೇಷವಾದ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಡಿ.ಕೆ. ಶಿವಕುಮಾರ್ : ಈ ಅನುಕೂಲ ಮಾಡಿಕೊಡಲು ಈ ಒಂದು ಅವಕಾಶವನ್ನು ಚರ್ಚೆಯ ಅಡಿಯಲ್ಲಿ ತಾವು ಅವಕಾಶ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಮಗ್ರವಾಗಿ ಚರ್ಚೆ ಮಾಡಬಹುದು. ಆದರೆ ಇಲ್ಲಿ ನಾನು ಕೇಳಿದಂಥ ಡೀಟೇಲ್ಸ್ ಕೊಡುವುದಕ್ಕೆ ಏನು ತೊಂದರೆ ಇದೆ?

ಅಧ್ಯಕ್ಷರು : ಚರ್ಚೆಗೆ ತೆಗೆದುಕೊಳ್ಳುತ್ತಾರೆ, ಆ ಸಂದರ್ಭದಲ್ಲಿ ಡೀಟೇಲ್ಸ್ ಎಲ್ಲವನ್ನೂ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಿಷಯಕ್ಕೆ ಈಗ ರಿಪ್ಲೈ ಕೊಡಲಿ, ಆಮೇಲೆ ಡೀಟೈಲ್ಸ್ ಕೊಡಲಿ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ ನನ್ನ ಹತ್ತಿರ ಲಭ್ಯವಿರುವ ಮಾಹಿತಿ ಪ್ರಕಾರ ನಾನು ಇದನ್ನು ಹೇಳುತ್ತಿದ್ದೇನೆ. ಮಾನ್ಯ ಮಾರುತಿರಾವ್ ಪವಾರ್ ಒಂದು ಪ್ರಶ್ನೆ ಕೇಳಿದರು. ದಿನಾಂಕ :20.2.1995ರಲ್ಲಿ ಖಾಸಗಿ ಸಂಸ್ಥೆಯೊಂದರಲ್ಲಿ ಈಗಾಗಲೇ ಎಂಓಯು ಗೆ ಸೈನ್ ಆಗಿತ್ತು ಎನ್ನುವಂಥ ಮಾತನ್ನು ಅವರು ಹೇಳಿದರು. ಈಗ ನಾನು ಹೇಳುವುದೇನೆಂದರೆ ದಿನಾಂಕ : 3.4.1997ರಲ್ಲಿ ಈಗಾಗಲೇ ಅಗ್ರಿಮೆಂಟ್ ಆಗಿದೆ. 7 ಸಾವಿರ ಎಕರೆ ಸರ್ಕಾರಿ ಜಮೀನು ಹಾಗೂ 13 ಸಾವಿರ ಎಕರೆ ಈ ಟೌನ್‌ಶಿಪ್‌ಗಾಗಿ ಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಸರ್ಕಾರ ಇದನ್ನು ಫ್ರೀ ಕೊಡುವುದಾಗಲಿ ಅಥವಾ ಸರ್ಕಾರದಿಂದ ಹಣ ಕೊಡುವ ವ್ಯವಸ್ಥೆಯಾಗಲಿ ಇಲ್ಲ. ಅವರು ಮಾರುಕಟ್ಟೆ ಬೆಲೆಯಲ್ಲಿ ಅಕ್ವಿಜೇಷನ್ ಮಾಡಿಕೊಂಡು ತೆಗೆದುಕೊಳ್ಳಬೇಕೇ ವಿನಃ ಸರ್ಕಾರದ ಹಣ ಅದಕ್ಕೆ ಕೊಡುವ ಯಾವ ವ್ಯವಸ್ಥೆ ಇಲ್ಲ. ಇದಕ್ಕಾಗಿ ಸಂಪೂರ್ಣವಾಗಿ ಹಣ ವಿನಿಯೋಗಿಸಬೇಕಾಗಿದ್ದು ಯಾವ ಸಂಸ್ಥೆಯಿಂದ ಈ ರಸ್ತೆಯನ್ನು ಮಾಡಬೇಕಾಗಿದೆ ಅವರೇ ರೈತರ ಜಮೀನುಗಳನ್ನು ಕೊಳ್ಳಬೇಕಾಗುತ್ತದೆ. ಕೊಂಡ ನಂತರ ಅವರು ಅಲ್ಲಿ ಟೆನ್‌ಶಿಪ್‌ಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ದೊಡ್ಡ ಪ್ರಾಜೆಕ್ಟ್‌ಗೆ ನೀವು ಗ್ಲೋಬಲ್ ಟೆಂಡರ್ ಏತಕ್ಕೆ ಕರೆಯುವುದಿಲ್ಲ? ಒನ್ ಟು ಒನ್ ಎಂ.ಓ. ಯು. ಏತಕ್ಕೆ? ಇವತ್ತು ಸುಮಾರು 10 ಕೋಟಿ ರೂಪಾಯಿಗಳ ಅವ್ಯವಹಾರ ನಡೆಯುತ್ತಿರಬಹುದು ಎಂದು ನನಗನಿಸುತ್ತಿದೆ.

ಅಧ್ಯಕ್ಷರು : ಇದರಿಂದ ನನಗೇನಾಗುತ್ತದೆ ಎಂದರೆ ಕೆಲವು ಪ್ರಶ್ನೆಗಳು ಲ್ಯಾಪ್ಸ್ ಆಗಿ ಹೋಗುತ್ತವೆ. ನಾನು ಇವೊತ್ತು $5^{1}/_{2}$ ಗಂಟೆಗೆ ಗೌರ್ನರ್‌ರವರನ್ನು ಭೇಟಿ ಮಾಡಬೇಕಾಗಿದೆ. ಬೇರೆ ಸಂದರ್ಭದಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗೆಯೇ ಆಗಲಿ, ಆದರೆ ಅವರು 5 ಸ್ಯಾಟಲೈಟ್ ಟೌನ್ ಎಂದು ಹೇಳಿದ್ದಾರೆ, ಆ ಟೌನ್‌ಗೆ ಸ್ಕೀಂ ಹಾಕಿದವರೇ ಬೇರೆಯವರು. ಅದಕ್ಕಾಗಿ ಅವರು ಈಗಾಗಲೇ ಲ್ಯಾಂಡ್ ಪರ್ಚೇಸ್ ಮಾಡಿಕೊಂಡು ಪುನಃ ಇವರಿಗೆ ರೀಸೇಲ್ ಮಾಡಿಕೊಂಡು ಇದೆಲ್ಲಾ ವ್ಯವಹಾರ ನಡೆಸಬೇಕೆಂದು ಕೆಲವು ಸಂಸ್ಥೆಯವರನ್ನು ಕಟ್ಟಿಕೊಂಡು ಹೊರಟಿದ್ದಾರೆ. ಅದಕ್ಕೆ ಇವರು ಈಗಾಗಲೇ ಡಿಮಾಂಡ್ ಮಾಡಿರುವಂತೆ ಬೇಕಾದರೆ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಅಲ್ಲಿಯವರೆಗೆ ಎಂ.ಓ.ಎಂ. ಗೆ ಸೈನ್ ಆಗುವುದು ಬೇಡ. ಏಕೆಂದರೆ ಮೊಮೊರೆಂಡಮ್ ಆಫ್ ಅಂಡರ್‌ಸ್ಟಾಂಡಿಂಗ್‌ಗೆ ನೀವು ಒಂದು ಸಲ ಸೈನ್ ಮಾಡಿದ ಕೂಡಲೇ ಬೈಂಡಿಂಗ್ ಆಗಿ ಕಾಂಪನ್‌ಸೇಷನ್ ಕೊಡುವುದಿಲ್ಲ. ಕೊಜೆಂಟ್ರಿಕ್ಸ್ ಬಗ್ಗೆ ಎಲ್ಲಾ ಕ್ರಮಗಳೂ ಆಗಿದ್ದರೂ ಸಹ ಇವತ್ತಿನ ದಿವಸ ಕೆಲಸ ನಡೆಯುತ್ತಿಲ್ಲ. ಇದನ್ನು ಡಿಲೇ ಮಾಡಿ ಪೆಂಡಿಂಗ್ ಇಟ್ಟರೆ ತೊಂದರೆಯೇನೂ ಆಗುವುದಿಲ್ಲ. ಅದಕ್ಕಾಗಿ ಇದನ್ನು ಸ್ವಲ್ಪ ದಿವಸ ಬದಿಗಿಡಿ. ಸದನದಲ್ಲಿ ಈ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾದ ಮೇಲೆ 5 ಸ್ಯಾಟಲೈಟ್ ಟೌನ್‌ಗೆ ಲ್ಯಾಂಡ್ ಯಾವುದು, ಎಕ್ಸ್‌ಪ್ರೆಸ್ ಹೈವೆಗೇ ಲ್ಯಾಂಡ್ ಯಾವುದು, ಅದರಲ್ಲಿ ಇವರು ಎಷ್ಟು ಹಣ

ಇಟ್ಟಿದ್ದಾರೆ, ಪ್ರೈವೇಟ್ ಪಾರ್ಟಿಯ ಹಣ ಎಷ್ಟು, ಪಾಲಿಟೀಷಿಯನ್ಸ್ ಹಣ ಎಷ್ಟು ಈ ಎಲ್ಲಾ ವಿವರಗಳೂ ಅದರಲ್ಲಿ ಬರಲಿ. ನಂತರ ನಾವು ಮುಂದಿನ ಚರ್ಚೆ ಮಾಡುತ್ತೇವೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮೊದಲು ಮಂತ್ರಿಗಳು ಇದನ್ನು ಕಲ್ಯಾಣಿ ಗ್ರೂಪ್ಸ್ ಆಫ್ ಇಂಡಸ್ಟ್ರೀಸ್‌ಗೆ ಕೊಟ್ಟಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದರು. ಈಗ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ನವರಿಗೆ ಕೊಟ್ಟಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ ಇದರಲ್ಲಿ ಯಾವುದು ಸತ್ಯ ? ಇನ್ನು ಮುಂದೆ ಇದು ಇನ್ನಾವುದಾದರೂ ಕಂಪನಿಗೆ ಬದಲಾವಣೆಯಾಗುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಕಲ್ಯಾಣಿ ಗ್ರೂಪ್ಸ್ ಆಫ್ ಇಂಡಸ್ಟ್ರೀಸ್ ಮತ್ತು ನಂದಿ ಇನ್‌ಪ್ರಾಸ್ಟ್ರಕ್ಚರ್ ಕಾರ್ಡರ್ ಇವೆರಡೂ ಸಹ ಒಂದೇ ಸಂಸ್ಥೆಗಳು.

ಅಧ್ಯಕ್ಷರು : ಅವೆರಡೂ ಒಂದೇ ಸಂಸ್ಥೆಗಳು.

ಕುಣಿಗಲ್‌ನಲ್ಲಿ ಕ್ರೀಡಾಂಗಣ ನಿರ್ಮಾಣ

3126 - ಶ್ರೀ ಎಸ್. ಪಿ. ಮುದ್ದುಹನುಮೇಗೌಡ (ಕುಣಿಗಲ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. *ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ಸ್ಥಾಪಿಸುವಲ್ಲಿ ಇದುವರೆವಿಗೂ ಆದ ಪ್ರಗತಿ ಏನು ?*
2. *ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?*
3. *ಸರ್ಕಾರವು ಈ ಯೋಜನೆಯ ಪ್ರಗತಿಗೆ ಹಾಕಿಕೊಂಡಿರುವ ಕಾರ್ಯಕ್ರಮವೇನು ?*

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನಾ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

1. ಕುಣಿಗಲ್ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಪಶುಸಂಗೋಪನಾ ಇಲಾಖೆಯ 7 ಎಕರೆ ಜಮೀನನ್ನು ಗುರುತಿಸಿ ತುಮಕೂರು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿಧಾನಸಭಾ ಸದಸ್ಯರೂ ಸೇರಿದಂತೆ ಕ್ರೀಡಾ ಸಮಿತಿಯ ಸಭೆಯಲ್ಲಿ ಸದರಿ ಜಮೀನಿನಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಈ ಸಂಬಂಧ ಉಪ-ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ತುಮಕೂರು ಇವರಿಗೆ ಪತ್ರ ಬರೆದಿದ್ದು, ಜಿಲ್ಲಾಧಿಕಾರಿ ತುಮಕೂರು ಇವರು ವಿಭಾಗಾಧಿಕಾರಿಗಳು, ಬೆಂಗಳೂರು ಇವರಿಗೆ ನಿವೇಶನವನ್ನು ಹಸ್ತಾಂತರಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ವಿಭಾಗಾಧಿಕಾರಿಗಳು, ಬೆಂಗಳೂರು ಇವರಿಗೆ ಮಂಜೂರಾತಿಗಾಗಿ ಸಲ್ಲಿಸಿರುವುದರಿಂದ ಮಂಜೂರಾಗಿ ಬಂದ ತಕ್ಷಣ, ಜಿಲ್ಲಾ ಪಂಚಾಯತ್ ವತಿಯಿಂದ ನಿರ್ಮಾಣ ಕಾರ್ಯ ಪ್ರಾರಂಭಿಸ ಲಾಗುವುದು.

3. ಜಮೀನು ಈ ಇಲಾಖೆಗೆ ವರ್ಗವಾದ ಮೇಲೆ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.